ಶ್ರೀ ಬಿ. ರಾಚಯ್ಯ.—ಸುಮಾರು 12 ಸಾವಿರದಷ್ಟು ಸುಟ್ಟು ಹೋಗಿದೆ ಎಂದು ವರದಿ ಬಂದಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಒಣಗಿದ ಬದುರ ಗಳು ಯಥೇಚ್ಛವಾಗಿ ಸಿಗುತ್ತದೆಯೆಂದು ಪ್ರಚಾರ ಮಾಡಿದ್ದೀರಿ ! ಒಂದು ರೋಡಿಗೆ 80 ರೂಪಾಯಿಗೆ ಕೊಡುತ್ತೀರಿ, ಹೊರಗಡೆಯ ಬೇಡಿಕೆ ಹೆಚ್ಚು ಇರುವುದರಿಂದ ಹೆಚ್ಚು ರೇಟು ಇಟ್ಟು ಏಕೆ ಮಾರಬಾರದು ?

ಶ್ರೀ ಬಿ. ರಾಚಯ್ಯ.—ಶರಾವತಿ ಮುಳುಗಡೆ ಪ್ರದೇಶದಲ್ಲಿ ಮತ್ತು ಶಿವಮೊಗ್ಗಾದಲ್ಲಿ ಇರುವ ಬದುರುಗಳನ್ನು ಮುಫತ್ತಾಗಿ ತೆಗೆದುಕೊಂಡು ಹೋಗಬಹುದು ಎಂದು ಹೇಳಿದ್ದೆವು, ಯಾರೂ ಸಹ ಬಂದು ತೆಗೆದುಕೊಂಡು ಹೋಗಲಿಲ್ಲ. ಬದುರುಗಳು ಒಣಗಿ ಹೋದರೆ ಸೌದೆಗಾಗಿ ಉಪ ಯೋಗಿಸುತ್ತಾರೆ, ಸ್ವಲ್ಪ ಹಸಿರು ಇದ್ದರೆ ಉಪಕರಣಗಳನ್ನು ತಯಾರು ಮಾಡಲು ತೆಗೆದುಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಹೆಚ್ಚಿನ ಬೇಡಿಕೆ ಇಲ್ಲದ್ದರಿಂದ, ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಯವರಿಗೆ ಕೊಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಗೆ ಬದುರುಗ ಳನ್ನು ಕೊಡುವ ಬದಲು ಭದ್ರಾವತಿಯಲ್ಲಿರುವ ಕಾಗದದ ಕಾರ್ಖಾನೆಗೆ ಕೊಡುವುದಕ್ಕಾಗುವುದಿಲ್ಲವೆ?

ಶ್ರೀ ಬಿ. ರಾಚಯ್ಯ.—ಭದ್ರಾವತಿಯಲ್ಲಿರುವ ಕಾರ್ಖಾನೆ ಜಾಯಿಂಟ್ ಸ್ಟಾಕ್ ಕಂಪೆನಿ. ಅವರು ಎಷ್ಟು ಬೇಕು ಎಂದು ಹೇಳಿದ್ದರೋ ಅಷ್ಟನ್ನು ಕೊಟ್ಟಿದ್ದೇವೆ. ಉಳಿದಿರುವ ಬದುರನ್ನು ಹೊರಗಡೆಯವರಿಗೆ ಕೊಡುತ್ತಿದ್ದೇವೆ.

ಶ್ರೀ ಎಸ್. ಪಿ. ಘಾಯದೆ.—ಯಲ್ಲಾಪುರದ ಕಾರ್ಖಾನೆಗೆ ಕೊಡಲು ಬದುರನ್ನು ರಿಜರ್ವ್ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಯಲ್ಲಾಪುರದ ಕಾರ್ಖಾನೆಯವರಿಗೆ ಕೊಡಲು ಒಂದು ಲಕ್ಷದ 30 ಸಾವಿರ ಟನ್ ಬದುರನ್ನು 5-6 ವರ್ಷದಿಂದ ಇಟ್ಟಿದ್ದೇವೆ. ಅಲ್ಲಯ ಕಾರ್ಖಾನೆ ಇನ್ನೂ ಪ್ರಾರಂಭವಾಗಿಲ್ಲ.

Cultivation of Aromatic Plants.

*Q.—296. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether Government have released 2,900 acres of land to Messrs. Oriental Aromatics, Bombay, in Doddaharve and Lingapur State forest of Hunsur Taluk for cultivation of aromatic plants;

(*b*) if so, the terms on which the grant was made;

(*c*) whether the parties have brought the entire extent under cultivation;

(*d*) if so, with what results ?

A.—Sri M. V. KRISHNAPPA (Minister for Revenue).—

(*a*) Not yet.

(*b*) (*c*) and (*d*) Do not arise in view of the reply to Clause (*a*).

Sri G. A. THIMMAPPA GOWDA.—May I know whether Messrs. Oriental Aromatics, Bombay, have asked for these lands ?

Sri M. V. KRISHNAPPA.—Yes, they have asked for these lands. They had been given ten acres of land and they have cultivated aromatic plants there and found that that area is suitable. So they have asked for more lands and Government is considering their application.

Sri G. A. THIMMAPPA GOWDA.—What are the terms ?

Mr. SPEAKER.—Terms, are not yet settled.

Sri G. A. THIMMAPPA GOWDA.— They have applied for the land. If so, for what purpose ?

Mr. SPEAKER.—While it is under negotiation, what is the point in asking this question ? If the Member want, to offer any suggestion, he may do it in the form of a question.

ಶ್ರೀ ಸಿ. ಆರ್. ರಂಗೇಗೌಡ.—ತಾವು 2,900 ಎಕರೆ ಜಮೀನನ್ನು ಕೊಡುವುದಕ್ಕೆ ಮೊದಲು, ನದರಿ ಕಂಪನಿಯವರು ಅಲ್ಲಿಯ ಜಮೀನನ್ನು ಪರಿಶೀಲನೆ ಮಾಡಿದ್ದಾರೆಯೇ ? ಅಲ್ಲಿಯ ಹವಾಗುಣ, ಮಣ್ಣಿನ ಗುಣ ಚೆನ್ನಾಗಿದೆಯೆಂದು ಒಪ್ಪಿಕೊಂಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—1961 ನೇ ಇಸವಿಯಲ್ಲಿ 10 ಎಕರೆ ಜಮೀನನ್ನು ತೆಗೆದುಕೊಂಡು, 4-5 ವರ್ಷದಿಂದ ಅಲ್ಲಿಯ ಭೂಗುಣ, ಮಣ್ಣಿನಗುಣ, ವಾತಾವರಣವನ್ನು ಪರಿಶೀಲನೆ ಮಾಡಿ, ಜಮೀನು ಚೆನ್ನಾಗಿದೆ ಕೊಡಿ ಎಂದು ಕೇಳಿದ್ದಾರೆ, ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಂಪೆನಿಯವರು ಕೇಳುವುದಕ್ಕೆ ಮುಂಚೆ ಶ್ರೀ ರೋರಿಚ್ ಅವರು ಕೇಳಿದ್ದಾರೆಯೇ ?

Sri M. V. KRISHNAPPA.—I do not think, Sir. He has I think, asked for land in Bangalore South Taluk some years back. He wants some bit of lands belonging to the Forest Department between two gardens. That request is with the Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಮ್ಮ ರಾಜ್ಯದಲ್ಲಿ ಆಹಾರ ಅಭಾವ ಜಾಸ್ತಿ ಇರುವುದರಿಂದ, ಜಮೀನನ್ನು ಕೊಡುವುದಿಲ್ಲ ಎಂದು ಹೇಳಬಾರದೆ ? ಜನಗಳಿಗೆ ವ್ಯವಸಾಯ ಮಾಡುವುದಕ್ಕೆ ಜಮೀನು ಇಲ್ಲದಿರುವುದರಿಂದ ಅವರಿಗೆ ಕೊಡುವುದು ಬಿಟ್ಟು 2,900 ಎಕರೆ ಜಮೀನನ್ನು ಅವರಿಗೆ ಕೊಡುವುದು ಅನ್ಯಾಯವಲ್ಲವೇ ?

ಶ್ರೀ ಎಂ ವಿ. ಕೃಷ್ಣಪ್ಪ.—ಈ ರೀತಿಯ ಭೂಮಿ ಇಂಡಿಯಾ ದೇಶದಲ್ಲಿ ಎಲ್ಲೂ ಸಿಗುವುದಿಲ್ಲ. ಅಲ್ಲದೆ ಈ ಸುಗಂಧಯುಕ್ತ ಗಿಡಗಳು ಬೇರೆ ಕಡೆ ಚೆನ್ನಾಗಿ ಬೆಳೆಯುವುದಿಲ್ಲ, ಆಹಾರ ಬೆಳೆಯುವುದಕ್ಕೂ ಜಮೀನನ್ನು ಕೊಡುತ್ತೇವೆ. ಈ ರೀತಿಯ ಗಿಡಗಳನ್ನು ಬೆಳೆಯಲು ಪ್ರೋತ್ಸಾಹ ಕೊಡಬೇಕಾಗುತ್ತದೆ.

Sri SANJIVANATHA AIKALA.—In view of the experience gained by the Oriental Aromatics as to the usefulness of the land and the possibility of growing aromatic plants to get foreign exchange, does the Government think of developing separate aromatic gardens in other places of the State apart from those 2900 acres ?

Sri M. V. KRISHNAPPA.—It is being done. Let us see how these Bombay people do their job there. The Government of Mysore is always a pioneer in such matters. Already the Forest Department is intending to grow these plants, which Mr. Roerich is growing in Bangalore.

ಶ್ರೀ ಆರ್. ಮುನಿಸ್ವಾಮಯ್ಯ.—ಮೈಸೂರು ರಾಜ್ಯದ ಜನರೇ ಈ ರೀತಿಯ ಗಿಡಗಳನ್ನು ಬೆಳೆಯುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಈ ಕಂಪೆನಿಯವರು ಪ್ರಯತ್ನ ಪಟ್ಟು ಬೆಳೆಸಿ ನಮ್ಮ ಜನರಿಗೆ ಕಲಿಸಿಕೊಟ್ಟಮೇಲೆ, ನಂತರ ಇವರೇ ಬೇಕಾದರೆ ಬೆಳೆಯಬಹುದು.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಈಗ ಆಹಾರದ ಅಭಾವವಿರುವಾಗ, ಸುಗಂಧಯುಕ್ತ ಗಿಡಗಳನ್ನು ಬೆಳೆಯಲು 2900 ಎಕರೆ ಜಮೀನು ಕೊಡುವುದು ನೋಡಿದರೆ, ಹೊತ್ತೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು ಎಂದು ಆಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಫ್ರಾನ್ಸ್‌ನಿಂದ ಕೋಟ್ಯಾಂತರ ರೂಪಾಯಿಗಳ ಸೆಂಟ್ಸ್ ತರಿಸುತ್ತಿದ್ದೇವೆ, ಇದನ್ನು ತಪ್ಪಿಸುವುದಕ್ಕೆ ನಮ್ಮ ದೇಶದಲ್ಲಿ ತಯಾರು ಮಾಡಲು, ಕೇಂದ್ರ ಸರ್ಕಾರದವರು ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದರಮೇಲೆ ನಮ್ಮ ರಾಜ್ಯದಲ್ಲಿ ಒಳ್ಳೆಯ ವಾತಾವರಣವಿರುವ, ಭೂಗುಣವಿರುವ ಜಾಗ ಸಿಕ್ಕಿದೆ, ಇದನ್ನು ಕೊಡುವುದರಿಂದ ನಷ್ಟವೇನೂ ಆಗುವು

ದಿಲ್ಲ. ಶ್ರೀಮಾನ್ ಶಿವಪ್ಪನವರಿಗೆ ಗೊತ್ತಿರಬಹುದು, ಸಾಪಿರಾರು ಎಕರೆಯಲ್ಲ ಇವತ್ತಿನದಿವಸ ಮಲ್ಲಗೆ ಗಿಡಗಳನ್ನು ಬೆಳೆಯುತ್ತಿದ್ದಾರೆ. ಆದ್ದರಿಂದ ಪ್ರತಿಯೊಂದಕ್ಕೂ ನಹಾಯ ಮಾಡ ಬೇಕಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಸುಗಂಧಯುಕ್ತ ಗಿಡಗಳನ್ನು ಬೆಳೆಯಲು 2900 ಎಕರೆ ಜಮೀನನ್ನು ಕೊಡುವುದಾದರೆ, ಅವರೇನಾದರೂ ಗಿಡಗಳನ್ನು ಬೆಳೆಯದೆ ಹೋದರೆ ಆ ಜಮೀನನ್ನು ವಾಪಸು ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಕಂಟ್ರಾಕ್ಟ್ ಇನ್ನೂ ಮುಗಿದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೊರದೇಶಗಳಿಂದ ಸೆಂಟ್ಸ್ ತರಿಸುವುದಕ್ಕೆ ಬದಲು ಆಹಾರ ಧಾನ್ಯಗಳನ್ನು ಏಕೆ ತರಿಸಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಸೆಂಟ್ಸ್ ತಯಾರಿಸಿ ಹೊರದೇಶಕ್ಕೆ ಕಳಿಸಿದರೆ ಹೆಚ್ಚು ಹಣ ಬರುತ್ತದೆ, ನಂತರ ಅದರ ನಾಲ್ಕರಷ್ಟು ಆಹಾರವನ್ನು ತರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಅವರಿಗೆ ಜಮೀನು ಕೊಡುವುದಕ್ಕೆ ಏನೇನು ಷರತ್ತುಗಳನ್ನು ಹಾಕಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯವಾಗಿ ಜಮೀನನ್ನು ಕೊಡುವಾಗ ಷರತ್ತುಗಳನ್ನು ಹಾಕೇ ಹಾಕುತ್ತೇವೆ. ಇಷ್ಟು ವರ್ಷದಲ್ಲ ಗಿಡಗಳನ್ನು ಬೆಳೆಯದಿದ್ದರೆ ಜಮೀನನ್ನು ಬಿಟ್ಟುಬಿಡಬೇಕಾಗುತ್ತದೆ, ಮತ್ತು ಅದರ ನಷ್ಟವನ್ನು ಕೊಡಬೇಕಾಗುತ್ತದೆ ; ರೂಲ್ಸ್ ಪ್ರಕಾರ ಕೊಡುತ್ತೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಗಿಡ ನಮ್ಮ ದೇಶದಲ್ಲಿರತಕ್ಕ ಕಣಿಮುಕ್ಕಲು ಜಾತಿಗೆ ಸೇರಿದ್ದು. ಇದನ್ನು ಮುನಾಪಲಿ ಮಾಡದೆ, ರೈತರಿಗೆ ಕೊಟ್ಟರೆ, ಅವರು ಬೇಲಿಯಲ್ಲ ಬೆಳೆದರೆ, ಗಿಡ ಚೆನ್ನಾಗಿ ಬರುತ್ತದೆ, ಮತ್ತು ಅವರು ಸಂಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದ ರಿಂದ ಎರ್ಲಾಕಡೆಯೂ ಗಿಡ ನಪ್ಲೈ ಮಾಡಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾದ್ದು ಹೇಳಿ, ಬೇಕಾದಷ್ಟು ಮಾಡುತ್ತೇವೆ.

———

Facilities provided to the residents of Jayapur and Vijapur Villages.

*Q.—389 Sri T. MADAIAH GOWDA (Ramanagaram).—

Will the Government be pleased to state :—

(*a*) when the new villages of Jayapur and Vijapur in Ramanagaram Taluk were formed ;

(*b*) the facilities if any, given to the residents of those villages ;

(*c*) the annual amount of land assessment collected from the ryots belonging to these villages ?

A.—Sri M. V. KRISHNAPPA (Minister for Revenue).—

(*a*) About 20 years ago.

(*b*) Primary school, Drinking water wells, Roads and Community centre are provided.

(*c*) Rs. 1,634-50.

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಈ ಗ್ರಾಮಗಳಲ್ಲ ನರಿಯಾದ ಖಾತೆ, ಖರದಿ, ಪಹಣಿ ನರ್ವೆ ರಿಕಾರ್ಡುಗಳು, ರಿಕಾರ್ಡ್ಸ್ ಆಫ್ ರೈಟ್ಸ್ ಇಲ್ಲದೇ ಇರುವುದರಿಂದ ವಿಶೇಷವಾಗಿ ಲಿಟಿಗೇಷನ್ ಪ್ರಾರಂಭವಾಗಿ ರೈತರಿಗೆ ತೊಂದರೆಯಾಗಿದೆ. ಇದುವರೆಗೆ ನಾಗುವಳಿ ಚೀಟಿ ಕೊಟ್ಟಿಲ್ಲ ಎನ್ನುವುದು ನರ್ಕಾರದ ಗಮನಕ್ಕೆ ಬಂದಿದೆಯೇ ?